# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ದಿನಾಂಕ: 06-12-2016 ರಂದು ಬೆಳಿಗ್ಗೆ 10.30 ಗಂಟೆಗೆ ನಡೆದ ಸಭೆಯ ನಡವಳಿಗಳು**

| ಕ್ರ. ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1. | ನೇತ್ರಾ ನಾರಾಯಣ್ | – ಅಧ್ಯಕ್ಷರು | ಜಂಟಿ ಆಯುಕ್ತರು (ದಕ್ಷಿಣ) |
| 2. | ಸವಿತಾ ವಿ.ಕೃಷ್ಣ | – ಸದಸ್ಯರು | ಜಂಟಿ ಆಯುಕ್ತರು (ದಾಸರಹಳ್ಳಿ) |
| 3. | ಎನ್.ಉಮಾ | – ಸದಸ್ಯರು | ಜಂಟಿ ಆಯುಕ್ತರು (ಪಶ್ಚಿಮ) |
| 4. | ರಾಧಮ್ಮ ವೆಂಕಟೇಶ್ | – ಸದಸ್ಯರು | ಜಂಟಿ ಆಯುಕ್ತರು (ಆರ್.ಆರ್.ನಗರ |
| 5. | ಜಿ.ಬಾಲಕೃಷ್ಣನ್ | – ಸದಸ್ಯರು | ಕಾನೂನು ಕೋಶ ಮುಖ್ಯಸ್ಥರು |
| 6. | ವಿ.ಸುರೇಶ್ | – ಸದಸ್ಯರು | ಉಪ ಕಾನೂನು ಅಧಿಕಾರಿ |
| 7. | ಹೆಚ್.ಕುಸುಮಾ | – ಸದಸ್ಯರು | ಉಪ ಆಯುಕ್ತರು (ದಕ್ಷಿಣ) |
| 8. | ಎಂ.ಮಾಲತಿ | – ಸದಸ್ಯರು | ಉಪ ಆಯುಕ್ತರು (ಪಶ್ಚಿಮ) |
| 9. | ಎಂ.ಶಾಮಲ | – ಸದಸ್ಯರು | ಉಪ ಆಯುಕ್ತರು (ಮ.ಪುರ) |
| 10. | ಕೆ.ವಿ.ರಾಜೇಂದ್ರಕುಮಾರ್ | – ಸದಸ್ಯರು | ಉಪ ಆಯುಕ್ತರು (ಆರ್.ಆರ್.ನಗರ) |
| 11. | ಎಂ.ಗೌತಮ್ ಕುಮಾರ್ | – ಸದಸ್ಯರು | ಕಂದಾಯ ಅಧಿಕಾರಿ (ಬೊಮ್ಮನಹಳ್ಳಿ) |
| | | | ಸ.ನಿ.ಹಣಕಾಸು-ಪಶ್ಚಿಮ |
| | | | ಎ.ಸಿ.ಆಡಿಟ್ ಸೆಲ್ |
| | | | ಎ.ಓ.ಆಡಿಟ್ ಸೆಲ್ |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸಿಕೊಳ್ಳಲಾಯಿತು)

ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಸಮಿತಿಯ ಸದಸ್ಯರುಗಳಿಗೆ ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರುತ್ತಾ ಅಭಿವೃದ್ಧಿ ಶುಲ್ಕ ಪಾವತಿಸಿಕೊಂಡಿರುವ ಮತ್ತು ಮೊಬೈಲ್ ಟವರ್‌ಗಳಿಗೆ ತೆರಿಗೆಯನ್ನು ವಸೂಲು ಮಾಡದೆ ಇರುವುದರಿಂದ ಲೆಕ್ಕಪರಿಶೋಧನಾ ವರದಿಯಲ್ಲಿ ವಸೂಲಾತಿಗೆ ಸೂಚಿಸುತ್ತಿರುವ ಸಂಬಂಧ ಚರ್ಚಿಸಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲು ಸಭೆಯನ್ನು ನಿಗಧಿಪಡಿಸಿ, ಸಭೆಯ ತಿಳುವಳಿಕೆ ಪತ್ರವನ್ನು ವಲಯ ಜಂಟಿ ಆಯುಕ್ತರು ಹಾಗೂ ಉಪ ಆಯುಕ್ತರರುಗಳಿಗೆ ಜಾರಿ ಮಾಡಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕಳುಹಿಸಲಾಗಿದ್ದರೂ, ಕೆಲವು ವಲಯಗಳ ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿ ಸಮಿತಿಗೆ ಅಗೌರವ ತೋರಿರುತ್ತಾರೆಂದು ಅಸಮಾಧಾನ ವ್ಯಕ್ತಪಡಿಸಿ, ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ನೋಟೀಸು ಜಾರಿ ಮಾಡುವಂತೆ ಆಯುಕ್ತರಿಗೆ ಶಿಫಾರಸ್ಸು ಮಾಡುವುದಾಗಿ ತಿಳಿಸಿದರು.

ನಂತರ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಬಾಕಿ ಇರುವ ಕಂಡಿಕೆಗಳು, ಆಕ್ಷೇಪಣಾ ಮೊತ್ತ, ವಸೂಲಾತಿಗೆ ಸಂಬಂಧಿಸಿದಂತೆ, ಈ ಹಿಂದಿನ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿತ್ತು. ಈ ಬಗ್ಗೆ ಕೈಗೊಂಡಿರುವ ಕ್ರಮದ ವಿವರವಾದ ಮಾಹಿತಿಯನ್ನು ಸಭೆಗೆ ಸಲ್ಲಿಸಲು ಹಾಜರಿದ್ದ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು. ಅದರಂತೆ ಜಂಟಿ ಆಯುಕ್ತರು (ದಾಸರಹಳ್ಳಿ) ಹಾಗೂ (ಆರ್.ಆರ್.ನಗರ) ರವರು ಈಗಾಗಲೇ ವಲಯ ಮಟ್ಟದಲ್ಲಿ ಸಭೆಗಳನ್ನು ನಡೆಸಿ ಅಧೀನ ಅಧಿಕಾರಿಗಳಿಗೆ ಈ ಬಗ್ಗೆ ಇಲಾಖಾವಾರು ಕಾರ್ಯಯೋಜನೆಯನ್ನು ರೂಪಿಸಿಕೊಂಡು ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆಗಳಿಗೆ ಹಾಗೂ ವಸೂಲಾತಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳುತ್ತಿರುವುದಾಗಿ ತಿಳಿಸಿದರು. ಉಳಿದಂತೆ ಹಾಜರಿದ್ದ ಇತರ ವಲಯದ ಅಧಿಕಾರಿಗಳು ಕೂಡ ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಅಧ್ಯಕ್ಷರು ಸೂಚಿಸಿದರು.

ನಂತರ ಅಭಿವೃದ್ಧಿ ಶುಲ್ಕಕ್ಕೆ ಸಂಬಂಧಿಸಿದಂತೆ ಚರ್ಚಿಸಿದಾಗ, ಈ ಬಗ್ಗೆ ನ್ಯಾಯಾಲಯದಲ್ಲಿ ಇದ್ದ ದಾವೆಯು ತೀರ್ಮಾನಗೊಂಡಿದ್ದು, ನ್ಯಾಯಾಲಯದ ಆದೇಶದಂತೆ ಮುಂದಿನ ಕ್ರಮ ವಹಿಸಬಹುದಾಗಿ ಹಾಜರಿದ್ದ ಕಾನೂನು ಕೋಶ ಮುಖ್ಯಸ್ಥರು ತಿಳಿಸಿದರು.

ಅಭಿವೃದ್ಧಿ ಶುಲ್ಕದ ಬಗ್ಗೆ ಚರ್ಚಿಸುತ್ತಾ ಯಾವ ಆಧಾರದ ಮೇಲೆ ಅಭಿವೃದ್ಧಿ ಶುಲ್ಕವನ್ನು ವಸೂಲು ಮಾಡದೇ ಖಾತಾ ಮಾಡಲಾಗಿರುತ್ತದೆ/ಯಾರ ನಿರ್ದೇಶನದನ್ವಯ ಸ್ವತ್ತುಗಳ ಮಾಲೀಕರುಗಳಿಂದ ಮುಚ್ಚಳಿಕೆ ಬರೆಸಿಕೊಂಡು ಖಾತಾ ಮಾಡಲಾಗಿದೆ ಎಂಬುದರ ಬಗ್ಗೆ ಸ್ಪಷ್ಟನೆ ಕೇಳಿದಾಗ, ಹಾಜರಿದ್ದ ಅಧಿಕಾರಿಗಳು ಅದಕ್ಕೆ ಪೂರಕವಾದ ಆದೇಶಗಳನ್ನು ಒದಗಿಸುವಲ್ಲಿ ವಿಫಲರಾಗಿರುತ್ತಾರೆ. ಕೇವಲ ಮೌಖಿಕ ಸೂಚನೆಯನ್ವಯ ಮುಚ್ಚಳಿಕೆ ಪತ್ರ ಸ್ವೀಕರಿಸಿ ಅಭಿವೃದ್ಧಿ ಶುಲ್ಕವನ್ನು ಪಾವತಿಸಿಕೊಳ್ಳದೇ ಇರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಈ ನಿಟ್ಟಿನಲ್ಲಿ ಆಯಾ ವರ್ಷಗಳಿಗೆ ಸಂಬಂಧಿಸಿದಂತೆ ಅಭಿವೃದ್ಧಿ ಶುಲ್ಕವನ್ನು ವಸೂಲು ಮಾಡುವುದು ಹೇಗೆ ಎಂಬ ಗೊಂದಲದಲ್ಲಿ ಅಧಿಕಾರಿಗಳು ಇರುತ್ತಾರೆ. ಒಂದು ವೇಳೆ ವಸೂಲು ಮಾಡದೇ ಇದ್ದಲ್ಲಿ ಲೆಕ್ಕಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿಗೆ ಕ್ರಮ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಈ ಮೊತ್ತವನ್ನು ಹೇಗೆ ವಸೂಲು ಮಾಡುವುದು ಎಂಬುದರ ಬಗ್ಗೆ ಹಾಗೂ ಕೆಲವು ಪ್ರಕರಣಗಳಲ್ಲಿ ವಿಭಜನೆ ಮಾಡಿ ಖಾತಾ ಮಾಡಲು ಅವಕಾಶ ಇಲ್ಲದೆ ಇರುವುದರಿಂದ ವಸೂಲು ಮಾಡಲು ಸಾಧ್ಯವಿರುವುದಿಲ್ಲವೆಂದು ತಿಳಿಸಿದಾಗ, ಕಾನೂನು ಕೋಶದ ಮುಖ್ಯಸ್ಥರವರು ನಿಯಮನುಸಾರ ಹಾಲಿ ಸದರಿ ಸ್ವತ್ತು ಯಾರ ಸುಪರ್ದಿನಲ್ಲಿರುತ್ತದೆ ಅವರುಗಳಿಂದಲೇ ಶುಲ್ಕವನ್ನು ಪಾವತಿಸಿಕೊಳ್ಳಬೇಕೆಂದು ತಿಳಿಸುತ್ತಾ ಕೆ.ಎಂ.ಸಿ.ಕಾಯ್ದೆ ಸೆಕ್ಷನ್ 467ರ ಪ್ರಕಾರ ಅಭಿವೃದ್ಧಿ ಶುಲ್ಕವನ್ನು 20 ಕಂತುಗಳಲ್ಲಿ ಪಾವತಿಸಬಹುದೆಂಬ ನಿಯಮವಿದ್ದು, ಸದರಿ ನಿಯಮವನ್ನು ತಿದ್ದುಪಡಿ ಮಾಡಬೇಕಾದ ಅವಶ್ಯಕತೆ ಇದ್ದು, ಈ ನಿಟ್ಟಿನಲ್ಲಿ ಕೂಡಲೇ ಸರ್ಕಾರದ

ಮಟ್ಟದಲ್ಲಿ ಚರ್ಚಿಸಿ ಕಾಯ್ದೆಯನ್ನು ತಿದ್ದುಪಡಿ ಮಾಡಲು ಮಾನ್ಯ ಆಯುಕ್ತರವರನ್ನು ಕೋರಬಹುದೆಂದು ಹಾಗೂ ಖಾತಾ ಮಾಡುವಾಗ, ನಕ್ಷೆ ಮಂಜೂರಾತಿ ನೀಡುವಾಗ ಮಾಲೀಕರುಗಳು ಮುಚ್ಚಳಿಕೆ ನೀಡಿದ್ದು, ಅದರ ಆಧಾರದ ಮೇಲೆ ಅಭಿವೃದ್ಧಿ ಶುಲ್ಕವನ್ನು ವಸೂಲು ಮಾಡಬೇಕೆಂದು ಮಾಹಿತಿ ನೀಡಿದರು. ಈ ವಿಷಯವನ್ನು ಆಯುಕ್ತರವರ ಅವಗಾಹನೆಗೆ ತಂದು ಸೂಕ್ತ ಕ್ರಮ ಕೈಗೊಳ್ಳಲು ಕೋರುವುದಾಗಿ ಅಧ್ಯಕ್ಷರು ತಿಳಿಸಿದರು.

ನಂತರ ಪಾಲಿಕೆಯ ವ್ಯಾಪ್ತಿಯಲ್ಲಿ ಅಳವಡಿಸಿರುವ ಮೊಬೈಲ್ ಟವರ್‌ಗಳಿಗೆ ಸಂಬಂಧಿಸಿದಂತೆ ಚರ್ಚಿಸಿದಾಗ, ಮೊಬೈಲ್ ಟವರ್‌ಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆಯು ಬಾಕಿ ಇರುವುದರಿಂದ ತೆರಿಗೆಯನ್ನು ವಸೂಲು ಮಾಡುತ್ತಿರುವುದಿಲ್ಲವೆಂದು ಹಾಜರಿದ್ದ ಅಧಿಕಾರಿಗಳು ತಿಳಿಸಿರುತ್ತಾರೆ. ಆದರೆ, ಮೊಬೈಲ್ ಟವರ್‌ಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಯಾವುದೇ ದಾವೆಯು ದಾಖಲಾಗಿರುವುದಿಲ್ಲವೆಂದು ಹಾಗೂ ನ್ಯಾಯಾಲಯದ ಪ್ರಕರಣ ದಾಖಲಾಗಿದ್ದರೆ ಕೂಡಲೇ ತೆರವುಗೊಳಿಸಿಕೊಡುವುದಾಗಿ ಸಭೆಯಲ್ಲಿ ಹಾಜರಿದ್ದ ಕಾನೂನು ಕೋಶದ ಮುಖ್ಯಸ್ಥರು ತಿಳಿಸಿರುತ್ತಾರೆ. ಅಲ್ಲದೆ ಟವರ್‌ಗಳಿಗ ಮತ್ತು ಓ.ಎಫ್.ಸಿ. ಕೇಬಲ್‌ಗಳಿಗೆ ಸಂಬಂಧಿಸಿದಂತೆ ತೆರಿಗೆ ವಿಧಿಸುವ ಬಗ್ಗೆ ಪಾಲಿಕೆಯ ವ್ಯಾಪ್ತಿಯಲ್ಲಿ ಯಾವುದೇ ನಿರ್ದಿಷ್ಟ ನಿಯಮವನ್ನು ರೂಪಿಸದೆ ಇರುವುದರಿಂದ, ಈ ಕುರಿತು ತೀರ್ಮಾನವನ್ನು ಕೈಗೊಳ್ಳಬೇಕೆಂದು, ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಸಲಹೆ ನೀಡಿದರು. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಸ್ಥಳೀಯ ಸಂಸ್ಥೆಗಳ ಅನುಮತಿ ಪಡೆದು ಮೊಬೈಲ್ ಟವರ್‌ಗಳನ್ನು ಅಳವಡಿಸಬಹುದೆಂಬ ಆದೇಶ ಇರುವುದಾಗಿ ತಿಳಿಸುತ್ತಾ, ಈ ಬಗ್ಗೆ ಈಗಾಗಲೇ ನಿಯಮಗಳನ್ನು ರಚಿಸಿ ಮುಖ್ಯ ಅಭಿಯಂತರರು (ಓ.ಎಫ್.ಸಿ) ರವರಿಗೆ ನೀಡಿದ್ದು, ಸದರಿಯವರು ಇದುವರೆವಿಗೂ ಯಾವುದೇ ಕ್ರಮವನ್ನು ವಹಿಸಿರುವುದು ತಿಳಿದುಬಂದಿರುವುದಿಲ್ಲ. ಈ ಮಧ್ಯೆ ಸರ್ಕಾರದ ಮಟ್ಟದಲ್ಲೇ ನಿಯಮಗಳನ್ನು ರಚಿಸಿರುವುದಾಗಿ ತಿಳಿದು ಬಂದಿದ್ದು, ಈಗ ಅದು ಆಕ್ಷೇಪಣಾ ಹಂತದಲ್ಲಿ ಇರುವುದಾಗಿ ಸಭೆಗೆ ಮಾಹಿತಿ ನೀಡಿದರು

ಆಗ ಅಧ್ಯಕ್ಷರು ಪಾಲಿಕೆಯ ವ್ಯಾಪ್ತಿಯಲ್ಲಿ ಅಳವಡಿಸಿರುವ ಮೊಬೈಲ್ ಟವರ್‌ಗಳ ಸಂಸ್ಥೆಯಿಂದ ಯಾವುದೇ ತೆರಿಗೆಯನ್ನು ವಸೂಲು ಮಾಡದೆ ಇದ್ದು, ಇದರಿಂದ ಪಾಲಿಕೆಗೆ ಕೋಟ್ಯಾಂತರ ರೂಗಳ ಆರ್ಥಿಕ ನಷ್ಟವಾಗಿರುತ್ತದೆ. ಈ ನಿಟ್ಟಿನಲ್ಲಿ ಇನ್ನು ಮುಂದೆ ಪಾಲಿಕೆಯ ವ್ಯಾಪ್ತಿಯಲ್ಲಿ ಮೊಬೈಲ್ ಟವರ್‌ಗಳಿಂದ ನಿಯಮಾನುಸಾರ ತೆರಿಗೆಯನ್ನು ವಸೂಲು ಮಾಡಲು ಸೂಕ್ತ ಕ್ರಮವನ್ನು ವಹಿಸಬೇಕೆಂದು ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು. ಈ ವಿಷಯವನ್ನು ಆಯುಕ್ತರವರ ಗಮನಕ್ಕೆ ತಂದು ಸೂಕ್ತ ನಿರ್ಣಯ ಕೈಗೊಳ್ಳುವಂತೆ ಕೋರುವುದಾಗಿ ತಿಳಿಸಿದರು.

ಮುಂದುವರಿದು ಜಾಹಿರಾತು ಫಲಕಗಳ ಬಗ್ಗೆ ಮಾತನಾಡುತ್ತಾ, ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಜಾಹಿರಾತು ಫಲಕಗಳನ್ನು ಅಳವಡಿಸಿದ್ದು, ಇದರಿಂದ ಪಾಲಿಕೆಗೆ ನೂರಾರು ಕೋಟಿ ನಷ್ಟ ಉಂಟಾಗುತ್ತಿರುವುದಾಗಿ, ಈ ನಿಟ್ಟಿನಲ್ಲಿ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ಹಾಗೂ ಜಾಹಿರಾತು ಫಲಕಗಳನ್ನು ಅಳವಡಿಸಲು ದರಗಳನ್ನು ಹೇಗೆ ನಿಗಧಿಪಡಿಸಲಾಗುತ್ತದೆ ಎಂಬುದರ ಮಾಹಿತಿಯನ್ನು ನೀಡಲು ಸೂಚಿಸಿದಾಗ, ಹಾಜರಿದ್ದ ಅಧಿಕಾರಿಗಳು ತಮ್ಮ ವಲಯ ವ್ಯಾಪ್ತಿಯಲ್ಲಿರುವ ಜಾಹಿರಾತು ಫಲಕಗಳ ನಿಖರ ಮಾಹಿತಿಯನ್ನು ನೀಡುವಲ್ಲಿ ವಿಫಲರಾಗಿರುತ್ತಾರೆ.

ಆಗ ಕಾನೂನು ಕೋಶದ ಮುಖ್ಯಸ್ಥರು ಜಾಹಿರಾತು ಬೈಲಾ ಪ್ರಕಾರ, ಜಾಹಿರಾತು ಫಲಕಗಳ ಅಳತೆ ಹಾಗೂ ಇತ್ಯಾದಿಗಳ ಆಧಾರದ ಮೇಲೆ ದರಗಳನ್ನು ನಿಗಧಿಪಡಿಸಲಾಗುವುದೆಂದು ಮಾಹಿತಿ ನೀಡಿದರು.

ಕೊನೆಯಲ್ಲಿ ಅಧ್ಯಕ್ಷರು ಮಾತನಾಡುತ್ತಾ, ಸಭೆಯಲ್ಲಿ ಚರ್ಚಿಸಿರುವ ವಿಷಯಗಳನ್ನು ಮಾನ್ಯ ಆಯುಕ್ತರವರ ಗಮನಕ್ಕೆ ತಂದು ಈ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕೋರುವುದಾಗಿ ಹಾಗೂ ವಲಯ ಜಂಟಿ ಆಯುಕ್ತರರುಗಳು ತಮ್ಮ ವಲಯ ವ್ಯಾಪ್ತಿಯಲ್ಲಿರುವ ಮೊಬೈಲ್ ಟವರ್‌ಗಳ ಮಾಹಿತಿಯನ್ನು ಪಡೆದು ನಿಯಮಾನುಸಾರ ತೆರಿಗೆಯನ್ನು ವಸೂಲು ಮಾಡುವಂತೆ ಅಧೀನ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಹಾಗೂ ಅಭಿವೃದ್ಧಿ ಶುಲ್ಕಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಇದ್ದ ದಾವೆಯು ಇತ್ಯರ್ಥಗೊಂಡಿದ್ದು, ನ್ಯಾಯಾಲಯದ ಆದೇಶದಂತೆ ಅಗತ್ಯ ಕ್ರಮ ವಹಿಸಬೇಕೆಂದು ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ, ವಸೂಲಾತಿಗೆ ಸಂಬಂಧಿಸಿಂತೆ ಈ ಹಿಂದಿನ ಸಭೆಯಲ್ಲಿ ಸೂಚಿಸಿರುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಬೇಜವಾಬ್ದಾರಿತನವನ್ನು ತೋರದೆ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಕಾರ್ಯಯೋಜನೆಯನ್ನು ರೂಪಿಸಿಕೊಂಡು ತಮ್ಮ ಅಧೀನ ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯವನ್ನು ನಿರ್ವಹಿಸುವಂತೆ ವಲಯ ಜಂಟಿ ಆಯುಕ್ತರರುಗಳು ಕ್ರಮವಹಿಸಬೇಕೆಂದು, ಇಲ್ಲವಾದಲ್ಲಿ ವಲಯ ಜಂಟಿ ಆಯುಕ್ತರರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡುವುದಾಗಿ ತಿಳಿಸಿ ಸಭೆಯನ್ನು ವಂದನೆಯೊಂದಿಗೆ ಮುಕ್ತಾಯಗೊಳಿಸಿದರು

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ

**ಪ್ರತಿಯನ್ನು:**

1.ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ವಿಶೇಷ ಕರ್ತವ್ಯಾಧಿಕಾರಿ ರವರಿಗೆ ಕಳುಹಿಸಿದೆ.

2.ಮಾನ್ಯ ಉಪ ಮಹಾಪೌರ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸಿದೆ.

3.ಮಾನ್ಯ ಆಯುಕ್ತರು ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

4.ಮಾನ್ಯ ಆಡಳಿತ ಪಕ್ಷದ ನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಜೆ.ಡಿ.ಎಸ್. ಪಕ್ಷದ ನಾಯಕರಿಗೆ ಮಾಹಿತಿಗಾಗಿ ಕಳುಹಿಸಿದೆ.

5.ಎಲ್ಲಾ ವಲಯ ಜಂಟಿ ಆಯುಕ್ತರವರುಗಳಿಗೆ ಕಳುಹಿಸುತ್ತಾ, ಸಭೆಯಲ್ಲಿ ಚರ್ಚಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.

6.ಎಲ್ಲಾ ವಲಯ ಉಪ ಆಯುಕ್ತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ

6.ಮುಖ್ಯ ಲೆಕ್ಕಾಧಿಕಾರಿಯವರ ಮಾಹಿತಿಗಾಗಿ

7.ಕಛೇರಿ ಕಡತಕ್ಕೆ